**ದಿನಾಂಕಃ 24.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಸಹಿ ನನ್ನದೇ ಇರುತ್ತದೆ.

**ಮುಂದುವರೆದ ಮುಖ್ಯವಿಚಾರಣೆ : ವಾದಿಯ ಪರ ವಕೀಲರಿಂದಃ**

1. ಮರಣ ಪ್ರಮಾಣ ಪತ್ರವನ್ನು ನಿಪಿ **68** ಎಂದು ಗುರುತಿಸಿತು.

**ಪಾಟೀಸವಾಲು : ಪ್ರತಿವಾದಿಯ ಪರ ವಕೀಲರಿಂದಃ**

1. ಚನ್ನಯ್ಯನವರಿಗೆ 3 ಜನ ಮಕ್ಕಳು ಇದ್ದರು, ಈಗ ಅವರಲ್ಲಿ ಇಬ್ಬರೇ ಜೀವಂತವಿರುತ್ತಾರೆ. ಚನ್ನಯ್ಯ ಸರ್ಕಾರಿ ಶಿಕ್ಷಕರಾಗಿದ್ದರು. ನನ್ನ ತಾಯಿ ಕೂಡಾ ಸರ್ಕಾರಿ ಶಿಕ್ಷಕಿಯಾಗಿದ್ದರು. 2 ನೇ ವಾದಿ ಉಮೇಶ್ ಮಿಚಿಗನ್ ನಲ್ಲಿ ಸ್ಕಾಡಾ ದಲ್ಲಿ ಇಂಜಿನಿಯರ್ ಆಗಿ ಉದ್ಯೋಗ ಮಾಡುತ್ತಿದ್ದಾರೆ. ನಾನು ಬೆಂಗಳೂರಿನಲ್ಲಿ ಖಾಸಗಿ ಕಂಪನಿಯಲ್ಲಿ ಉದ್ಯೋಗ ಮಾಡುತ್ತಿದ್ದೇನೆ. ನಾನು ಮತ್ತು ನನ್ನ ಅಣ್ಣ 2 ನೇ ವಾದಿ ನಮ್ಮ ನಮ್ಮ ವೃತ್ತಿಗಳ ರೀತ್ಯಾ ಬೇರೆ ಬೇರೆ ಕಡೆ ನೆಲೆಸಿದ್ದೇವೆ ಎಂದರೆ ಸರಿ. ನಮ್ಮ ತಂದೆ-ತಾಯಿ ಕೂಡ್ಲಿಗಿಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ಮತ್ತು ವಾದ ಪತ್ರದಲ್ಲಿ ಇರುವ ಮಾಹಿತಿಯನ್ನು ಯಾರು ಹೇಳಿದ್ದರು ? ಎಂದರೆ ನನ್ನ ತಂದೆ ಹೇಳಿದ್ದರು. ಈ ದಿನ ನಾನು ಹಾಜರು ಮಾಡಿದ ನಿಪಿ 68 ರ ಪ್ರಕಾರ ನನ್ನ ತಂದೆಯು ದಿನಾಂಕಃ 10.08.2020 ರಂದು ಮೃತಪಟ್ಟಿದ್ದಾರೆ ಎಂದರೆ ಸರಿ. ದಾವೆಯನ್ನು ನಾವು ಯಾವ ಇಸವಿಯಲ್ಲಿ ಸಲ್ಲಿಸಿದ್ದೇವೆ? ಎಂದರೆ 2018 ನೇ ಇಸವಿಯಲ್ಲಿ ಸಲ್ಲಿಸಿದ್ದೇವೆ. ಆ ಸಮಯದಲ್ಲಿ ನಮ್ಮ ತಂದೆ ಇನ್ನೂ ಜೀವಂತವಿದ್ದರು ಎಂದರೆ ಸರಿ. ಹಾಗಾದರೆ ಪ್ರತಿವಾದಿ ಮೋಸ ಮಾಡಿದ್ದಾರೆಂದು ನನ್ನ ತಂದೆಯೇ ಯಾಕೆ ದಾವೆ ಸಲ್ಲಿಸಲಿಲ್ಲ? ಎಂದರೆ ಈ ದಾವೆಯನ್ನು 2018 ರಲ್ಲಿ ನನ್ನ ತಂದೆಯೇ ಸಲ್ಲಿಸಿದ್ದಾರೆ. ಅಗ್ರೀಮೆಂಟ್ ಫೆಬ್ರವರಿ 2016 ರಲ್ಲಿ ಆಗಿರುತ್ತದೆ. 2016 ರಲ್ಲಿ ಆಗಿದ್ದ ಮೊದಲನೇ ಅಗ್ರೀಮೆಂಟ್ ನನ್ನ ತಂದೆ ಮತ್ತು ಪ್ರತಿವಾದಿಯ ನಡುವೆ ರೂ. 24 ಲಕ್ಷಗಳಿಗೆ ಆಗಿತ್ತು. ಸದರಿ ಅಗ್ರೀಮೆಂಟ್ ಆಗುವಾಗ ನಾನು ಹಾಜರಿರಲಿಲ್ಲ ಎಂದರೆ ಸರಿ. ಸದರಿ ಅಗ್ರೀಮೆಂಟ್ ಪ್ರಕಾರ ನನ್ನ ತಂದೆಯು ಪ್ರತಿವಾದಿಗೆ ರೂ. 24 ಲಕ್ಷ ಸಂದಾಯ ಮಾಡಿರುವ ಬಗ್ಗೆ ದಾಖಲೆ ಹಾಜರು ಮಾಡಿದ್ದೀರಾ? ಎಂದರೆ ಅಗ್ರೀಮೆಂಟ್ ಪ್ರಕಾರ ನನ್ನ ತಂದೆಯು ಪ್ರತಿವಾದಿ ಮಲ್ಲಿಕಾರ್ಜುನ ರವರು ಬೇರೆ ಬೇರೆಯವರ ಕಡೆ ಪಡೆದ ಸಾಲಗಳನ್ನು ಮರುಪಾವತಿ ಮಾಡಿರುತ್ತಾರೆ. ನನ್ನ ತಂದೆಯು ಪ್ರತಿವಾದಿ ಮಾಡಿದ ಸಾಲಗಳನ್ನು ತೀರುವಳಿ ಮಾಡಿರುವ ಬಗ್ಗೆ ದಾಖಲೆ ಹಾಜರು ಮಾಡಿದ್ದೀರಾ? ಎಂದರೆ ಅವುಗಳನ್ನು ಈಗಾಗಲೇ ಸಲ್ಲಿಸಲಾಗಿದೆ. ನನ್ನ ತಂದೆ ಮತ್ತು ಪ್ರತಿವಾದಿಯ ನಡುವೆ ಯಾವುದೇ ರೀತಿಯ ಬಾಕಿ ಹಣ ಉಳಿದಿಲ್ಲದಿದ್ದರೂ ನಾನು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2016 ರಿಂದ 2020 ನೇ ಇಸವಿ ವರೆಗೆ ಅಂದರೆ ಅಗ್ರೀಮೆಂಟ್ ಆದ 4 ವರ್ಷಗಳ ಕಾಲ ನನ್ನ ತಂದೆ ಜೀವಂತವಿದ್ದರು ಎಂದರೆ ಸರಿ. ಆದ್ದರಿಂದ ಒಂದು ವೇಳೆ ಪ್ರತಿವಾದಿ ವಂಚನೆ ಮಾಡಿದ್ದರೆ ನನ್ನ ತಂದೆ ಬದುಕಿರುವಾಗಲೇ ಪ್ರತಿವಾದಿ ವಿರುದ್ಧ ಸಿವಿಲ್ ಮತ್ತು ಕ್ರಿಮಿನಲ್ ಕ್ರಮಗಳನ್ನು ಜರುಗಿಸಿರುತ್ತಿದ್ದರು ಎಂದರೆ 2018 ರಲ್ಲೇ ನನ್ನ ತಂದೆ ದಾವೆ ಹಾಕಿದ್ದರು, ಆ ಬಗ್ಗೆ ದಾಖಲೆ ಹಾಜರು ಮಾಡಿದ್ದೇನೆ. ನನ್ನ ತಂದೆಯು ದಿನಾಂಕ 20.08.2018 ರಂದು ಪ್ರತಿವಾದಿಗೆ ನೋಟೀಸ್ ಕೊಟ್ಟ ಬಗ್ಗೆ ನನಗೆ ಗೊತ್ತಿದೆ. ಪ್ರತಿವಾದಿಯು ದಿನಾಂಕ 07.11.2018 ರಂದು

ರಿಪ್ಲೆ ನೋಟೀಸ್ ಕೊಟ್ಟಿದ್ದರು ಎಂದರೆ ಸರಿ. ಅದರಲ್ಲಿ ಪ್ರತಿವಾದಿಯು ನನ್ನ ತಂದೆ ನೀಡಿದ ನೋಟೀಸಿನಲ್ಲಿ ಹೇಳಿರುವ ಪ್ರಕಾರ ರೂ. 29 ಲಕ್ಷಕ್ಕೆ ಕರಾರು ಆಗಿರಲಿಲ್ಲ, ಅದು ರೂ. 23 ಲಕ್ಷಕ್ಕೆ ಆಗಿತ್ತು ಎಂದು ತಿಳಿಸಿದ್ದರು ಎಂದರೆ ಸರಿ.

***(ಸಮಯ ಮಧ್ಯಾಹ್ನ 2.00 ಗಂಟೆಯಾಗಿದ್ದರಿಂದ*** ಮುಂದುವರೆದ ***ಪಾಟೀಸವಾಲನ್ನು ಮಧ್ಯಾಹ್ನ 2.45 ಗಂಟೆಗೆ ಮುಂದೂಡಿತು).***

**ಮಧ್ಯಾಹ್ನ 2.45 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರಿಂದಃ**

2. ನನ್ನ ತಂದೆ ನೋಟೀಸ್ ಕೊಟ್ಟು, ಅದಕ್ಕೆ ಪ್ರತಿವಾದಿ ರಿಪ್ಲೆ ನೋಟೀಸ್ ಕೊಟ್ಟ ಒಂದು ತಿಂಗಳ ನಂತರ ನನ್ನ ತಂದೆ ಮತ್ತು ಪ್ರತಿವಾದಿಯು ಬಾಯಿ ಮಾತಿನಲ್ಲಿ ವ್ಯವಹಾರ ಸೆಟ್ಲಮೆಂಟ್ ಮಾಡಿಕೊಂಡಿದ್ದರಿಂದ ನನ್ನ ತಂದೆ ದಾವೆ ಹಾಕಿರಲಿಲ್ಲ ಎಂದರೆ ಸೆಟ್ಲಮೆಂಟ್ ಸಂಪೂರ್ಣವಾಗಿಲ್ಲ. ನಾನು ಹೇಳುವಂತೆ ನನ್ನ ತಂದೆ ಮತ್ತು ಪ್ರತಿವಾದಿಯ ನಡುವೆ ಸೆಟ್ಲಮೆಂಟ್ ಪೂರ್ಣಗೊಂಡಿರದೇ ಇದ್ದಲ್ಲಿ ನನ್ನ ತಂದೆ ಜೀವಂತ ಇರುವಾಗಲೇ ದಾವೆ ಹಾಕಿರುತ್ತಿದ್ದರು ಎಂದರೆ ನನ್ನ ತಂದೆಗೆ ಅನಾರೋಗ್ಯವಾಗಿದ್ದರಿಂದ ಅವರು ಇರುವಾಗಲೇ ದಾವೆ ಹಾಕಲಿಲ್ಲ. ಲೀಗಲ್ ನೋಟೀಸ್ ನೀಡಿದ ನಂತರ ನನ್ನ ತಂದೆಯು 2 ವರ್ಷಗಳ ಕಾಲ ಜೀವಂತವಿದ್ದರು ಎಂದರೆ ಸರಿ. ನನ್ನ ತಂದೆ-ತಾಯಿ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದರು ಮತ್ತು ನಾನು ಹಾಗೂ ನನ್ನ ಅಣ್ಣ ಕೂಡಾ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದರಿಂದ ನನ್ನ ತಂದೆ ಮಾಡಿರುವ ವ್ಯವಹಾರದ ಬಗ್ಗೆ ನಮಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ನಮ್ಮ ತಂದೆ ಇರುವಾಗ ಅವರು ನಮಗೆ ಎಲ್ಲಾ ಮಾಹಿತಿ ಕೊಟ್ಟಿದ್ದರು.

3. ರೂ. 20 ಲಕ್ಷ ಮೌಲ್ಯದ ಕರಾರಿನ ಮೇಲೆ ನಾವು ನ್ಯಾಯಾಲಯಕ್ಕೆ ಕೋರ್ಟ್ ಶುಲ್ಕವಾಗಿ ಎಷ್ಟು ಮೊತ್ತವನ್ನು ಸಂದಾಯ ಮಾಡಿದ್ದೇವೆ? ಎಂದರೆ ನನಗೆ ನೆನಪಿಲ್ಲ. ನೋಂದಣಿಯಾಗದ ಕ್ರಯದ ಕರಾರಿನ ಮೇಲೆ ನ್ಯಾಯಾಲಯ ಸ್ಟಾಂಪ್ ಶುಲ್ಕ ಮತ್ತು ದಂಡ ಪಾವತಿ ಮಾಡುವಂತೆ ಆದೇಶ ಮಾಡಿದ ನಂತರ ನಾವು ಸ್ಟಾಂಪ್ ಶುಲ್ಕ ಮತ್ತು ದಂಡವಾಗಿ ಎಷ್ಟು ಮೊತ್ತವನ್ನು ಪಾವತಿ ಮಾಡಿದ್ದೇವೆ? ಎಂದರೆ ಅಂದಾಜು ರೂ. ಏಳೂವರೆ ಲಕ್ಷ ಪಾವತಿ ಮಾಡಿದ್ದೇವೆ. ನಿಪಿ1 ಕರಾರಿನಲ್ಲಿ ನನ್ನ ತಂದೆಯು ಶೇ. 50ರ ಅನುಪಾತದಲ್ಲಿ ಹಣ ಹಂಚಿಕೆ ಮಾಡಿಕೊಳ್ಳಲು ಒಪ್ಪಿದ್ದು, ನಾವು ಅರ್ಧ ಭಾಗದ ನಿವೇಶನಗಳನ್ನು ಕೋರದೇ ಯಾವ ಕಾರಣಕ್ಕೆ ಹಣ ವಸೂಲಾತಿ ದಾವೆ ಸಲ್ಲಿಸಿದ್ದೇವೆ? ಎಂದರೆ ನನ್ನ ತಂದೆಯು ಲೀಗಲ್ ನೋಟೀಸಿನಲ್ಲಿ ಹಣ ವಸೂಲಾತಿ ಕೋರಿದ್ದರಿಂದ ದಾವೆಯಲ್ಲಿ ಅದೇ ಪರಿಹಾರವನ್ನು ಕೋರಿದ್ದೇವೆ. ನನ್ನ ತಂದೆ ಪ್ರತಿವಾದಿಗೆ ರೂ. 20 ಲಕ್ಷ ಸಂದಾಯ ಮಾಡಿದ ಬಗ್ಗೆ ಬ್ಯಾಂಕ್ ಸ್ಟೇಟ್ ಮೆಂಟ್ ಹಾಜರು ಮಾಡಿದ್ದೇವೆ. 2016ರಲ್ಲಿ ಪ್ರತಿವಾದಿಯ ಜೊತೆ ಮಾಡಿಕೊಂಡ ಮೊದಲನೇ ಕರಾರಿನಲ್ಲಿ ಪ್ರತಿವಾದಿ ಮೋಸ ಮಾಡಿದ್ದಾರೆಂದು ಹೇಳಿದ ನಂತರ 2018ರಲ್ಲಿ ಮತ್ತೆ ಪ್ರತಿವಾದಿಯ ಜೊತೆ ಕರಾರು ಮಾಡಿಕೊಳ್ಳುವ ಅವಶ್ಯಕತೆ ಏನಿತ್ತು? ಎಂದರೆ 2016 ರಿಂದ 2018ರ ವರೆಗೆ ಯಾವುದೇ ಮೋಸ ನಡೆದಿರಲಿಲ್ಲ. 2ನೇ ಅಗ್ರೀಮೆಂಟ್ ಎಷ್ಟು ಮೊತ್ತದ ಹಣಕ್ಕೆ ಆಗಿತ್ತು? ಎಂದರೆ ನೆನಪಿಲ್ಲ. 2ನೇ ಅಗ್ರೀಮೆಂಟ್ ಯಾರ ಯಾರ ನಡುವೆ ಆಗಿತ್ತು? ಎಂದರೆ ಸಿದ್ದೇಶ್, ಮಹೇಶ, ನಟರಾಜ ಮತ್ತು ನನ್ನ ತಂದೆ ನಡುವೆ ಆಗಿತ್ತು. ಸದರಿ ಸಿದ್ದೇಶ ಪಿ.ಡಬ್ಲೂ 1 ಎಂದು ಸಾಕ್ಷಿ ಹೇಳುವಾಗ 1 ಮತ್ತು 2ನೇ ಕರಾರಿನ ಎಲ್ಲಾ ಮೊತ್ತವನ್ನು ಪಾಲುದಾರನಾಗಿ ನಾನೇ ಸಂದಾಯ ಮಾಡಿದ್ದೇನೆ ಎಂದು ಹೇಳಿದ್ದಾರೆ, ಅದಕ್ಕೆ ನೀವು ಏನು

ಹೇಳುವಿರಿ? ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ 5 ರಿಂದ ನಿಪಿ 67 ಬಾಂಡ್ ಗಳಲ್ಲಿ ನಮೂದಾಗಿರುವ ನಿವೇಶನ ಮತ್ತು ಹಣದ ಮೊತ್ತದ ಬಗ್ಗೆ ನಿಮಗೆ ಮಾಹಿತಿ ಇದೆಯೇ? ಎಂದರೆ ಮಾಹಿತಿ ಇದೆ, ಸದರಿ ಬಾಂಡ್ ಗಳಲ್ಲಿ ನಮೂದಾಗಿರುವ ಮೊತ್ತವನ್ನು ಆಯಾ ವ್ಯಕ್ತಿಗಳಿಗೆ ವಾಪಸ್ಸು ಮಾಡಿದ್ದೇವೆ. ಆ ರೀತಿ ಸದರಿ ವ್ಯಕ್ತಿಗಳಿಗೆ ಹಣದ ಮೊತ್ತಗಳನ್ನು ವಾಪಸ್ಸು ಮಾಡಿರುವ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿದ್ದೀರಾ? ಎಂದರೆ ಮಾಡಿದ್ದೇವೆ. ಸದರಿ ಬಾಂಡ್ ಗಳು ಯಾವ ವ್ಯಕ್ತಿ ಹಣ ಕೊಟ್ಟು ಪಡೆದುಕೊಂಡಿರುತ್ತಾನೆಯೋ ಆ ವ್ಯಕ್ತಿಯ ಸ್ವಾಧೀನದಲ್ಲೇ ಇರುತ್ತವೆ ಎಂದರೆ ಅವರಿಗೆ ಹಣ ಸಂದಾಯ ಮಾಡಿ ಅವರಿಂದ ಬಾಂಡ್ ಗಳನ್ನು ವಾಪಸ್ ಪಡೆದಿದ್ದೇವೆ. 2016 ರಿಂದ 2018 ನೇ ಇಸವಿಯಲ್ಲಿ ಪ್ರತಿವಾದಿಯು ತನ್ನ ಜಮೀನನ್ನು ಕೃಷಿ ಉದ್ದೇಶದಿಂದ ನಿವೇಶನಗಳಾಗಿ ಮಾಡುವ ಯಾವುದೇ ಭೂಪರಿವರ್ತನೆ ಮಾಡಿಸಿರಲಿಲ್ಲ ಎಂದರೆ ಅದರ ಬಗ್ಗೆ ನನಗೆ ಐಡಿಯಾ ಇಲ್ಲ. ಭೂಪರಿವರ್ತನೆ ಆಗದೇ ಇರುವ ಜಮೀನಿನಲ್ಲಿ ಯಾವ ಯಾವ ವ್ಯಕ್ತಿಗೆ ಯಾವ ಯಾವ ನಿವೇಶನ ಎಂದು ನಮೂದಿಸಿ ನನ್ನ ತಂದೆ ಹೇಗೆ ಅಗ್ರಿಮೆಂಟ್ ಬರೆದುಕೊಟ್ಟಿದ್ದರು? ಎಂದರೆ ನನಗೆ ಐಡಿಯಾ ಇಲ್ಲ. ನಮ್ಮ ತಂದೆ ತೀರಿಕೊಂಡ ನಂತರ ವಾದಿಗಳು ಈ 67 ಬಾಂಡ್ ಗಳನ್ನು ಸೃಷ್ಟಿಸಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನಿಪಿ 5 ರಿಂದ ನಿಪಿ 67 ದಾಖಲೆಗಳಲ್ಲಿ ಯಾವ ದಾಖಲೆಯಲ್ಲೂ ಸಾಕ್ಷಿಗಳ ಸಹಿಗಳು ಮತ್ತು 2 ನೇ ಪಕ್ಷಕಾರರ ಸಹಿಗಳು ಇಲ್ಲವೆಂದರೆ ಅದರ ಬಗ್ಗೆ ಮಾಹಿತಿ ಇಲ್ಲ. ಈ ನಿಪಿ 5 ರಿಂದ ನಿಪಿ 67 ಎಲ್ಲಾ ದಾಖಲೆಗಳಲ್ಲಿ 1 ನೇ ಪಕ್ಷಕಾರರಾಗಿ ಎನ್. ಮಲ್ಲಿಕಾರ್ಜುನ ರವರ ಹೆಸರು ನಮೂದಾಗಿದೆ, ಹಾಗಾದರೆ ಈ ದಾಖಲೆಗಳು ನಮ್ಮ ವಶಕ್ಕೆ ಹೇಗೆ ಬಂದವು? ಎಂದರೆ ಪ್ರತಿವಾದಿಯು ಪಾರ್ಟನರ್ ಆಗಿರುವುದರಿಂದ ಅವರು ಕಲೆಕ್ಟ್ ಮಾಡಿ ನಮ್ಮ ವಶಕ್ಕೆ ಕೊಟ್ಟಿದ್ದಾರೆ. ಬಾಂಡ್ ಗಳ ಜೊತೆ ಹಾಜರು ಮಾಡಿರುವ ಕಾವೇರಿ ಡೆವಲಪರ್ಸ್ ರಸೀದಿಗಳಲ್ಲಿ ಹಣ ಕೊಟ್ಟವರ ಸಹಿ ಮತ್ತು ಹಣ ಪಡೆದವರ ಸಹಿಗಳು ಇಲ್ಲವೆಂದರೆ ಅದರ ಬಗ್ಗೆ ಮಾಹಿತಿ ಇಲ್ಲ. ನಮ್ಮ ತಂದೆ ತೀರಿಕೊಂಡ ನಂತರ ವಾದಿಗಳಾದ ನಾವು ಪ್ರತಿವಾದಿಯಿಂದ ದುರ್ಲಾಭ ಪಡೆಯುವ ಉದ್ದೇಶದಿಂದ ಈ ದಾಖಲೆಗಳನ್ನು ಹಾಜರು ಮಾಡಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಚನ್ನಯ್ಯನವರ ಮಕ್ಕಳು ಮತ್ತು ಸಿದ್ದೇಶ ಶಾಮೀಲಾಗಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. 5 ಮತ್ತು 6 ನೇ ವಾದಿಗಳು ನಿಜವಾಗಿಯೂ ಪಾಲುದಾರರಾಗಿದ್ದಲ್ಲಿ ಅವರೇ ದಾವೆಯಲ್ಲಿ ಹಾಜರಾಗಿ ಖುದ್ದಾಗಿ ದಾವೆ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ಅಗ್ರಿಮೆಂಟ್ ನಲ್ಲಿ ಇರುವ ಜಮೀನಿನ ಸರ್ವೇ ನಂಬರ್ ನೆನಪಿಲ್ಲ, ಆದರೆ ಅದು 8 ಎಕರೆ ಇರುತ್ತದೆ. ನನಗೆ ಆ ಜಮೀನಿನ ಚೆಕ್ಕುಬಂದಿ ಗೊತ್ತಿಲ್ಲ. ನಮ್ಮ ತಂದೆ ಬದುಕಿದ್ದಾಗ ನನಗೆ ಮಾಹಿತಿ ತಿಳಿಸಿದ್ದರೆ ನಾನು ಎಲ್ಲಾ ವಿವರಗಳನ್ನು ಹೇಳುತ್ತಿದ್ದೆ, ನಾನು ದಾಖಲೆಗಳನ್ನು ಓದಿಕೊಂಡು ಬಂದು ಸಾಕ್ಷಿ ಹೇಳುತ್ತಿರುವ ಕಾರಣ ನನ್ನಿಂದ ಜಮೀನಿನ ವಿವರಗಳನ್ನು ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಇರುವಾಗ ಪ್ರತಿವಾದಿ ರೂ. 49 ಲಕ್ಷದ ವಂಚನೆ ಮಾಡಿದ್ದಲ್ಲಿ ಅವರು ಪ್ರತಿವಾದಿಯ ವಿರುದ್ಧ ಕೂಡಲೇ ಕ್ರಿಮಿನಲ್ ಕ್ರಮವನ್ನು ಜರುಗಿಸುತ್ತಿದ್ದರು ಎಂದರೆ ಅವರಿಗೆ ಪ್ಯಾಂಕ್ರಿಯಾಟಿಕ್ ಕ್ಯಾನ್ಸರ್ ಆಗಿದ್ದರಿಂದ ಅವರು ಕ್ರಮ ತೆಗೆದುಕೊಳ್ಳಲು ಆಗಿರಲಿಲ್ಲ . ನಮ್ಮ ತಂದೆಯ ಪರವಾಗಿ ನಾವು ಯಾಕೆ ಕ್ರಮ ಜರುಗಿಸಲಿಲ್ಲ ? ಎಂದರೆ ನಮಗೆ ಆಗ ನಮ್ಮ ತಂದೆಯ ಆರೋಗ್ಯವೇ ಮುಖ್ಯವಾಗಿತ್ತು. ನನ್ನ ತಂದೆ ಶಿಕ್ಷಕರಾಗಿದ್ದು ಅವರು ಸುಳ್ಳು ಪ್ರತಿಪಾದನೆ ಮಾಡಬಾರದೆಂದು ಯಾವುದೇ ದಾವೆ ಹಾಕಿರಲಿಲ್ಲ ಆದರೆ ಅವರು ತೀರಿಕೊಂಡ ನಂತರ ನಾವು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. 2 ನೇ ವಾದಿ ನನ್ನ ಅಣ್ಣನಿಗೆ ಎಲ್ಲಾ ವಿಚಾರ ಗೊತ್ತಿದ್ದರೂ ಮತ್ತು ಆತನಿಗೆ ಏರ್ ಮೇಲ್ ಮೂಲಕ ನೋಟೀಸ್ ಜಾರಿಯಾಗಿದ್ದರೂ ಆತ ಕೋರ್ಟ್ ಮುಂದೆ

ಹಾಜರಾಗುತ್ತಿಲ್ಲ ಎಂದರೆ ನನ್ನ ಅಣ್ಣನಿಗೆ ನೋಟೀಸ್ ಜಾರಿಯಾದ ಬಗ್ಗೆ ನನಗೆ ಸೂಕ್ತ ಮಾಹಿತಿ ಇರುವುದಿಲ್ಲ. ನನಗೆ ಮತ್ತು ನನ್ನ ತಾಯಿಗೆ ಹೊಸಪೇಟೆಯ ನ್ಯಾಯಾಲಯದಿಂದ ನೋಟೀಸ್ ಬಂದಿತ್ತು ಎಂದರೆ ಸರಿಯಲ್ಲ. ಈ ದಾವಾ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ಹಗರಿಬೊಮ್ಮನಹಳ್ಳಿ